## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162, ಗಿರಿನಗರ, ಬೆಂಗಳೂರು.

### ಜೂನ್ 2022 : ವಾರ್ಡ್ ಸಮಿತಿಯ 1ನೇ ಸಭೆಯ ನಡವಳಿಗಳು

***********

ಉಲ್ಲೇಖ : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 22-09-2021.

******

ದಿನಾಂಕ : 07-06-2022.
ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ
ಸಮಯ : ಪೂರ್ವಾಹ್ನ 11.00 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್ .ಪಿ | ಮಾನ್ಯ ಮುಖ್ಯ ನಗರ ಯೋಜಕರು ಹಾಗೂ ನೋಡಲ್ ಅಧಿಕಾರಿಗಳು. |
| 2 | ಶ್ರೀ ರಮೇಶ್.ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-162, ಗಿರಿನಗರ. |
| 3 | ಶ್ರೀಮತಿ ಡಾ॥ ಮೇಘನಾ | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ರವಿಕುಮಾರ್ | ಎಸ್.ಡಬ್ಲ್ಯೂ.ಎಮ್ ವಾರ್ಡ್ ನಂ-162,ಗಿರಿನಗರ |
| 5 | ಶ್ರೀ ಪ್ರವೀಣ್.ಕೆ. | ಪೋಲಿಸ್ ಇಲಾಖೆ, ಗಿರಿನಗರ. |
| 6 | ಶ್ರೀ ಭವತೇಶ್ | ಪೋಲಿಸ್ ಇಲಾಖೆ, ಗಿರಿನಗರ. |
| 7 | ಶ್ರೀ ವಸಂತ್ ಕುಮಾರ್ | ಕಂದಾಯ ಇಲಾಖೆ, ಗಿರನಗರ. |
| 8 | ಶ್ರೀ ರಂಜೀತ್ | ಮಾರ್ಷಲ್, ಗಿರಿನಗರ ವಾರ್ಡ್. |
| 9 | ಶ್ರೀ ಎಸ್.ಎಂ.ಆರ್.ಪ್ರಸಾದ್ | ವಾರ್ಡ್ ಸದಸ್ಯರು-ಗಿರಿನಗರ. |
| 10 | ಶ್ರೀ ಆರ್ ಸತೀಶ್ | ವಾರ್ಡ್ ಸದಸ್ಯರು-ಗಿರಿನಗರ. |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಆದ ಶ್ರೀ ಸುನಿಲ್‌ಕುಮಾರ್ .ಪಿ ರವರು ಸ್ವ ಪರಿಚಯ ಮಾಡಿಕೊಂಡು ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಲಸಿಕೆ ನೀಡುವ ಪ್ರಕ್ರಿಯನ್ನು ಚುರುಕುಗೊಳಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು, ಇದಕ್ಕೆ ಸಭೆಯಲ್ಲಿ ಹಾಜರಿದ್ದ ಪಿ.ಹೆಚ್.ಸಿ ವೈದ್ಯರಾದ ಡಾ॥ ಮೇಘನಾರವರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ವ್ಯಾಕ್ಸಿನ್ ನೀಡಲಾಗುತ್ತಿದ್ದು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ ಶಾಲೆಗಳಲ್ಲಿನ ಮಕ್ಕಳಿಗೆ ಕಾರ್ಬೋವ್ಯಾಕ್ಸಿನ್ ಮತ್ತು ಕೋವಿಡ್ ವ್ಯಾಕ್ಸಿನ್ ಲಸಿಕೆಯನ್ನು ನೀಡಲಾಗುತ್ತಿದೆ ಮತ್ತು ದಿ: 21.05.2022 ರಿಂದ ಇಂದಿನವರೆಗೆ ಸುಮಾರು 07 ಕೋವಿಡ್ ಪ್ರಕರಣಗಳು ವಾರ್ಡ್

ವ್ಯಾಪ್ತಿಯಲ್ಲಿ ಕಂಡುಬಂದಿದ್ದು ಎಲ್ಲರೂ ಮನೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದಿರುತ್ತಾರೆ.

2. ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ವಾರ್ಡ್ ವ್ಯಾಪ್ತಿಯಲ್ಲಿನ ಟ್ರಾನ್ಸ್‌ಫಾರ್‌ಮರ್‌ಗಳ ಬದಲಾವಣೆ ಬಗ್ಗೆ ಕೈಗೊಂಡಿರುವ ಕ್ರಮದ ವಿವರಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸುವಂತೆ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

3. ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ ಬೀದಿ ದೀಪಗಳನ್ನು ಮೇಲ್ದರ್ಜೆಗೇರಿಸಲು ಸಂಬಂಧಿಸಿದ ವಿದ್ಯುತ್ ಇಲಾಖೆಯವರಿಗೆ ತಿಳಿಸುವಂತೆ ವಾರ್ಡ್ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

4. ವಾರ್ಡ್ ವ್ಯಾಪ್ತಿಯಲ್ಲಿನ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ಚರಂಡಿಯ ಆಳವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ವಾರ್ಡ್ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

5. ವಾರ್ಡ್‌ನ ಬಿ.ಎಸ್.ಕೆ 3ನೇ ಹಂತ,4ನೇ ಬ್ಲಾಕ್, ಮತ್ತು 6ನೇ ಬ್ಲಾಕ್ ಶ್ರೀ ವಿದ್ಯಾನಗರ ಸುತ್ತಾ ಮುತ್ತಲಿನ ಭಾಗದ ರಸ್ತೆಗಳಲ್ಲಿ ಮರಗಳನ್ನು ಟ್ರಿಮ್ ಮಾಡಲು ಅರಣ್ಯ ಇಲಾಖೆಯವರಿಗೆ ಸೂಚಿಸಲು ವಾರ್ಡ್ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

6. ವಾರ್ಡ್ ವ್ಯಾಪ್ತಿಯಲ್ಲಿನ ರಿಂಗ್ ರಸ್ತೆಯ ಫ್ಲೈ-ಓವರ್ ಕೆಳಭಾಗದಲ್ಲಿನ ಜಾಗವನ್ನು ಕೆಲ ಸಾರ್ವಜನಿಕರು ಒತ್ತುವರಿ ಮಾಡಿದ್ದು ಜಾಗವನ್ನು ತೆರವುಗೊಳಿಸಿ ಆ ಜಾಗದಲ್ಲಿ ಗಿಡಗಳನ್ನು ನೆಟ್ಟು ಹಸಿರೀಕರಣ ಮಾಡಿರುವುದಕ್ಕೆ ಸಭೆಯಲ್ಲಿ ಹಾಜರಿದ್ದ ಕೆಲ ಸದಸ್ಯರು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.

7. ವಾರ್ಡ್ ವ್ಯಾಪ್ತಿಯಲ್ಲಿನ ರಾಜಕಾಲುವೆಗಳಲ್ಲಿ ಒಳ ಚರಂಡಿ ನೀರು ಹರಿಯುವುದನ್ನು ಶೇ 65% ರಷ್ಟು ನಿಲ್ಲಿಸಿದ್ದು ಬಾಕಿ ಶೇ 35% ರಷ್ಟು ನೀರನ್ನು ಹರಿಯದಂತೆ ಕ್ರಮವಹಿಸಲಾಗುವುದು ಎಂದು ಮಳೆ ನೀರು ವಿಭಾಗದ ಸಹಾಯಕ ಅಭಿಯಂತರರಾದ ಶ್ರೀ. ಸತೀಶ್‌ರವರು ಸಭೆಯಲ್ಲಿ ಅಧ್ಯಕ್ಷರ ಗಮನಕ್ಕೆ ತಂದಿರುತ್ತಾರೆ.

8. ಮಾನ್ಯ ಹಸಿರು ನ್ಯಾಯಾಧಿಕರಣದ ಆದೇಶದಂತೆ ಮಳೆ ನೀರು ಕಾಲುವೆ ಹಾಗೂ ಸರ್ವೀಸ್ ರಸ್ತೆಗಳ ಒತ್ತುವರಿಯನ್ನು ತಡೆಯಲು ಹಾಗೂ ಪಾಲಿಕೆಯ ಜಾಗವನ್ನು ಸಂರಕ್ಷಿಸುವ ಸಲುವಾಗಿ Fencing ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಮಳೆ ನೀರು ವಿಭಾಗದ ಸಹಾಯಕ ಅಭಿಯಂತರರಾದ ಶ್ರೀ. ಸತೀಶ್ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

9. ಈಗಾಗಲೇ ಹಿಂದಿನ ಸಭೆಯಲ್ಲಿ ಆಟೋ ಟಿಪ್ಪರ್‌ಗಳಲ್ಲಿ ಹೆಚ್ಚುವರಿ ಕಸವನ್ನು ಹಾಕದಂತೆ ಮಾನ್ಯ ಅಧ್ಯಕ್ಷರು ಆದೇಶ ನೀಡಿದ್ದರೂ ಸಹ ಆಟೋ ಟಿಪ್ಪರ್‌ಗಳಲ್ಲಿ ಹೆಚ್ಚುವರಿ ಕಸವನ್ನು ಹಾಕುವುದು ಕಂಡು ಬಂದಿರುತ್ತದೆ, ಹಾಗಾಗಿ ಮುಂದೆ ಅಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

10. ವಾರ್ಡ್ ವ್ಯಾಪ್ತಿಯಲ್ಲಿನ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನುಗ್ಗದಂತೆ ಪಾಲಿಕೆಯ 2022-2023 ರ ಆಯವ್ಯಯದಲ್ಲಿ ವಾರ್ಡ್‌ಗಳಿಗೆ ಮೀಸಲಿಟ್ಟಿರುವ ಅನುದಾನದಲ್ಲಿ ರೂ.20.00 ಲಕ್ಷಗಳಲ್ಲಿ 2 ಕಾಮಗಾರಿಗಳನ್ನು ಕೈಗೊಂಡು ಗಿರಿನಗರ 2ನೇ ಫೇಸ್ ಶಾಂತಿನಗರ ಶಾಲೆ ಸುತ್ತಾ ಮುತ್ತಾ ಮತ್ತು ಗಿರಿನಗರ 4ನೇ ಫೇಸ್‌ನಲ್ಲಿ ರಾಜಕಾಲುವೆ ಹೊಂದಿಕೊಂಡಿರುವ

ಚರಂಡಿಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ನಿರ್ವಹಿಸಬೇಕೆಂದು ವಾರ್ಡ್‌ನ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

11. ಶ್ರೀ ವಿದ್ಯಾನಗರ 1 ನೇ ಅಡ್ಡ ರಸ್ತೆಯಲ್ಲಿ ಬೆಸ್ಕಾಂ ವತಿಯಿಂದ ಅಳವಡಿಸಿರುವ 11 ಕೆ.ವಿ ಕೇಬಲ್‌ನ್ನು ರಸ್ತೆಯ ಕೆಳಭಾಗದಲ್ಲಿ ಅಳವಡಿಸಬೇಕೆಂದು ಬೆಸ್ಕಾಂ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

12. ಬ್ಲಾಕ್ ಸಂಖ್ಯೆ 9 ರಲ್ಲಿ ಯಾವ ಸಮಯಕ್ಕೆ ಟಿಪ್ಪರ್‌ಗಳು ಯಾವ ರಸ್ತೆಯಿಂದ ಕಸ ಸಂಗ್ರಹಿಸುವುದು ಸೂಕ್ತ ಎಂದು ನಿರ್ಧರಿಸಿರುವ ಬಗ್ಗೆ ಸರ್ವೆ ಮಾಡಿ ಸಭೆಗೆ ವರದಿ ನೀಡಿರುತ್ತಾರೆ.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

01/06/2022

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 162, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 162, ಗಿರಿನಗರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಲಯ ಆಯುಕ್ತರು ( ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.